ಜೊತೆಗೇ ಇರಿಸಿಕೊಂಡು ಇವರೇ ಸಾಕುತ್ತಿದ್ದರು ಎನ್ನಬಹುದು. ಎರಡನೇ ಮಗ ಚೆನ್ನಾಗಿ ಓದಿ, ಮದುವೆಯಾಗಿ ಹೊರದೇಶದಲ್ಲಿದ್ದ. ಮಗಳು ಮದುವೆಯಾಗಿ, ದೂರದ ಊರಿನಲ್ಲಿದ್ದು ತನ್ನ ಸಂಸಾರ ತಾಪತ್ರಯಗಳಲ್ಲಿದ್ದರೂ, ತನ್ನ ಕೈಲಾದಷ್ಟು ತಂದೆಯನ್ನು ನೋಡಿಕೊಳ್ಳುತ್ತಿದ್ದಳು.

'ನನ್ನ ಹೆಂಡತಿ ಎರಡು ವರ್ಷದ ಹಿಂದೆ ತೀರಿಕೊಂಡಳು ಮೇಡಂ. ಅವಳಿದ್ದಾಗ ನನಗ್ಯಾವ ಚಿಂತೆಯೂ ಇರಲಿಲ್ಲ. ರುಚಿಯಾದ ಅಡುಗೆ ಮಾಡಿ ಬಡಿಸೋಳು!' ಅಂತ ನೆನಪಿಸಿಕೊಳ್ಳುವಾಗ ತಡೆಯದೇ ಕಣ್ಣೀರುಹಾಕಿಬಿಟ್ಟರು. ಈಗ ಅವರ ಸೊಸೆ, ಬೆಳಿಗ್ಗೆಯೇ ಅಳೆದು ಒಂದು ಲೋಟ ಅಕ್ಕಿ ತೆಗೆದಿಡುತ್ತಾಳಂತೆ, ಅನ್ನ ಇವರೇ ಮಾಡಿಕೋತಾರಂತೆ. 'ಕೆಲವೊಮ್ಮೆ ಪಕ್ಕದ ಮನೆಯವರು ಏನಾದರೂ ಮಾಡಿದ್ದು ಕೊಡುತ್ತಾರೆ, ಇಲ್ಲವಾದ್ರೆ ಹೋಟೆಲ್‌ನಿಂದ ಸಾಂಬಾರ್ ತಂದು ತಿಂತೀನಿ' ಅಂದರು.



ಅವರಿದ್ದ ಈ ಮನೆ ಅವರೇ ಸಂಪಾದಿಸಿರುವ ಆಸ್ತಿ. ಕೇಸ್ ಹಾಕಿರುವ ಈ ಮಗ ಇನ್ನೂ 14 ವರ್ಷದವನಿದ್ದಾಗಲೇ ಅವರು ಮನೆ ಕಟ್ಟಿಸಿದ್ದರು. 'ಮನೆ ಕಟ್ಟಿಸುವಲ್ಲಿ ತಾನೂ ತನ್ನ ಸ್ವಂತ ದುಡಿಮೆಯ ಹಣ ಹಾಕಿದ್ದೇನೆ ಎಂದು ಸುಳ್ಳು ನುಡಿದು, ತನಗೆ ಇದರಲ್ಲಿ ಅರ್ಧ ಪಾಲಿದೆ ಎಂದು ಹೇಳಿದ್ದ. ಹಾಗೆಯೇ ನೇರವಾಗಿ ಇವರನ್ನೇ ಆಸ್ತಿಯಲ್ಲಿ ಪಾಲು ಕೇಳಿದ್ದರೆ ಇವರೇ ಕೊಟ್ಟುಬಿಡುತ್ತಿದ್ದರೇನೋ. ಆದರೆ ಹೀಗೆ ಕೊಡಲು ಅವರಿಗೆ ಮನಸ್ಸಿರಲ್ಲಿಲ್ಲ. ಈ ದಾವೆ ಹಾಕುವಲ್ಲಿ ಇವರ ಮಗನ ಲಾಯರ್‌ನ ಕುಮ್ಮಕ್ಕೂ ಇತ್ತು ಎಂದು ನನಗೆ ಆಮೇಲೆ ತಿಳಿಯಿತು.

ಆ ಕೇಸ್‌ಗೆ ಉತ್ತರಿಸಿ, ಹೇಗೆ ಈ ಆಸ್ತಿ ಇವರದ್ದೇ ಸ್ವಂತ ದುಡಿಮೆಯ ಆಸ್ತಿ ಹಾಗೂ ಅದರಲ್ಲಿ ಯಾರಿಗೂ ಪಾಲು ಕೇಳುವ ಹಕ್ಕಿಲ್ಲ; ಹಾಗೆಯೇ ದಾವೆ ಹಾಕಿದ ಈ ಮಗ ಯಾವುದೇ ರೀತಿಯಲ್ಲಿ ಮನೆ ಕಟ್ಟಲು ಸಹಾಯ ಮಾಡಲಿಲ್ಲ ಎಂಬುದನ್ನು ಇವರ ಪ್ರತಿವಾದೀ ಉತ್ತರದಲ್ಲಿ ಹೇಳಿದೆವು. ಇವರು ಹಿರಿಯ ನಾಗರಿಕರಾಗಿದ್ದರಿಂದ, ದಾವೆಯ ದಿನಾಂಕಗಳನ್ನು ಬೇಗಬೇಗನೇ ಹಾಕಿಸಿಕೊಂಡೆವು. ಈ ಸೌಲಭ್ಯ ಕಾನೂನಲ್ಲಿಯೇ ಇದೆ. ಆದರೂ ಆ ಕೋರ್ಟ್‌ನಲ್ಲಿದ್ದ ನ್ಯಾಯಾಧೀಶರೂ ಸೂಕ್ಷ್ಮ ಮನಸ್ಸಿನವರಾದ್ದರಿಂದ ಮಾತ್ರ ಇದು ಸಾಧ್ಯವಾಯಿತು. ದಾವೆಯಲ್ಲಿ ಇವರೇ ಗೆದ್ದರು, ಮನೆ ಇವರದ್ದೇ, ಮಗನಿಗೆ ಅದರಲ್ಲಿ ಪಾಲಿಲ್ಲವೆಂದು ನಿರ್ಣಯವಾಯಿತು. ಆದರೂ ದಾವೆ ಮುಗಿಯಲು ಎರಡು ವರ್ಷ ತೆಗೆದುಕೊಂಡಿತು.

ದಾವೆಗೆ ಪ್ರತ್ಯುತ್ತರ ಕೊಡುತ್ತಲೇ, ನಮ್ಮ ಸಲಹೆಯ ಮೇರೆಗೆ, ಅವರ ವೀಲುನಾಮೆ ಮಾಡಿ, ಅವರ ಇಚ್ಛೆಯಂತೆ ಆಸ್ತಿಯನ್ನು ಎರಡನೇ ಮಗ ಹಾಗೂ ಮಗಳಿಗೆ ಸಮಾನವಾಗಿ ಬರೆದಿದ್ದರು. ಅದನ್ನು ರಿಜಿಸ್ಟರ್ ಮಾಡಿಸಿ ಇಡಲಾಗಿತ್ತು. ದಾವೆ ತೀರ್ಮಾನವಾಗಿ, ಒಂದು ವರ್ಷದೊಳಗಾಗಿ ಅವರು ಕಾಲವಶರಾದರು.

ಎಷ್ಟೋ ಪೋಷಕರು, ಅದೆಷ್ಟೇ ಆಸ್ತಿಯಿದ್ದರೂ ಎಲ್ಲವನ್ನೂ ಮಗನಿಗೋ, ಮಕ್ಕಳಿಗೋ ದಾನವಾಗಿ ಬರೆದು, ನಂತರ ಅವರ ಅಸಡ್ಡೆಗೆ ತುತ್ತಾಗುತ್ತಾರೆ. ಹೀಗೇ ಒಬ್ಬ ದಂಪತಿ, 'ಐದು ಕಂಪನಿಗಳ ಒಡೆಯರಾಗಿದ್ದೆವು. ನಾಲ್ಕು ಮನೆ ಇತ್ತು. ಮಗ ಹೇಗೂ ವ್ಯವಹಾರವನ್ನು ನೋಡಿಕೊಳ್ಳಬೇಕು; ನಮ್ಮನ್ನೂ ಕೈಬಿಡುವುದಿಲ್ಲ ಎಂಬ ಭರವಸೆಯಿಂದ ಆಸ್ತಿಯನ್ನೆಲ್ಲ ಅವನಿಗೇ ಬರೆದೆವು. ಈಗ ನಮ್ಮನ್ನು ಹೊರಹಾಕಿದ್ದಾನೆ' ಎಂದರು.

ದಾನಪತ್ರವೋ ಕ್ರಯಪತ್ರವೋ ಮಾಡುವ ಮೊದಲು ಬಹಳ ಸಾವಧಾನವಾಗಿ ಜೋಪಾನವಾಗಿ ಇರಬೇಕು. ಒಮ್ಮೆ ಮಾಡಿದರೆ ಅದು ನಮ್ಮದಾಗಿ ಉಳಿಯುವುದೇ ಇಲ್ಲ. ಈ ಕಾನೂನಿನ ಸತ್ಯವನ್ನು, ಮಕ್ಕಳ ಮೇಲಿನ ಮೋಹಪಾಶಕ್ಕೆ ಒಳಗಾದವರಿಗೆ ತಿಳಿಹೇಳುವುದು ಬಹಳ ಕಷ್ಟ. ಸ್ವಂತ ಮಕ್ಕಳಿಗೂ ಆಸ್ತಿ ದಾನ ಅಥವಾ ಮಾರಾಟ ಮಾಡುವ ಬದಲು, ಕೊಡಬೇಕು ಅನಿಸಿದ್ದನ್ನು ವೀಲುನಾಮೆಯ ಮೂಲಕ ಕೊಡಬಹುದು. ಅದು ಅವರು ಕಾಲವಾದ ಮೇಲೆ, ಯಾರಿಗೆ ಆಸ್ತಿ ಬರೆದಿರುತ್ತಾರೋ ಅವರಿಗೆ ಹೋಗುತ್ತದೆ. ಕಾಲವಾಗುವ ಮೊದಲು ವೀಲುನಾಮೆಯ ಕರ್ತೃ ಅದನ್ನು ಬದಲಿಸಲೂಬಹುದು. ಯಾವುದೇ ಕಾರಣಕ್ಕೆ ಮಕ್ಕಳಿಗೆ ದಾನವೋ ಕ್ರಯವೋ ಮಾಡಬೇಕಾಗಿ ಬಂದರೆ, ತಮ್ಮ ಸ್ವಂತ ಖರ್ಚಿಗೆ ಹಣವನ್ನೂ ಇರಲು ಮನೆಯನ್ನು ಇಟ್ಟುಕೊಂಡೇ ಉಳಿದದ್ದನ್ನು ಕೊಡಬಹುದು.

ಜಿ.ಪಿ.ಎ. (ಜನರಲ್ ಪವರ್ ಆಫ್ ಅಟಾರ್ನಿ) ಮಾಡುವುದೂ ಅಪಾಯಕಾರಿ. ಹಾಗೆ ಮಾಡಲೇಬೇಕಾದರೆ, ಆದಷ್ಟೂ ನಿರ್ದಿಷ್ಟ ಕಾರಣಕ್ಕೆ, ನಿಯಮಿತ ರೀತಿಯಲ್ಲಿ ಎಸ್.ಪಿ.ಎ. (ಸ್ಪೆಸಿಫಿಕ್ ಪವರ್ ಆಫ್ ಅಟಾರ್ನಿ)ಯನ್ನಾದರೂ ಮಾಡಬಹುದು.

ನಮ್ಮ ಪೋಷಕರನ್ನು, ಮನೆಯ ಹಿರಿಯರನ್ನು ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ – ಇದನ್ನೂ ಕಾನೂನೇ ಹೇಳಬೇಕೆ? ಎಂಬ ಪ್ರಶ್ನೆ ನನ್ನಲ್ಲಿ ಕೆಲವು ಬಾರಿ ಮೂಡಿದ್ದುಂಟು. ಆದರೆ, ಮನೆಯ ಹೆಂಗಸರನ್ನು ಹಿಂಸಿಸಬಾರದು; ಮಕ್ಕಳಿಗೆ ಕಿರುಕುಳ ಕೊಡಬಾರದು ಎಂಬುದನ್ನೂ ನಮಗೆ ಕಾನೂನೇ ಹೇಳಬೇಕಾಗಿದೆ ಎಂಬುದೂ ಸತ್ಯ!

ಸೆ.125, ಸಿ.ಆರ್.ಪಿ.ಸಿ. ಹೇಳುವಂತೆ, ತಮ್ಮ ಮಕ್ಕಳು ಜೀವನಾಂಶ ಕೊಡದೇ ನಿರ್ಲಕ್ಷ್ಯ ಮಾಡುತ್ತಿದ್ದರೆ ಅಂತಹ ಪೋಷಕರು ತಮ್ಮ ಮಕ್ಕಳ ಮೇಲೆ ದಾವೆ ಹಾಕಿ ಜೀವನಾಂಶ ಪಡೆಯಬಹುದು.

2007ರಲ್ಲಿ ಜಾರಿಗೆ ತರಲಾದ, 'ಪೋಷಕರ ಹಾಗೂ ಹಿರಿಯ ನಾಗರಿಕರ ಜೀವನಾಂಶ ಮತ್ತು ಕಲ್ಯಾಣ ಕಾಯಿದೆ, ಪೋಷಕರ ರಕ್ಷಣೆ, ಕಲ್ಯಾಣಕ್ಕೆ ಕೆಲವು ಮಾರ್ಗಸೂಚಿಗಳನ್ನು ಕೊಟ್ಟಿದೆ. ಮಗ, ಮಗಳು, ಮೊಮ್ಮಕ್ಕಳೂ ಸೇರಿದಂತೆ, ಪೋಷಕರನ್ನು ಜೀವನಾಂಶ ಕೊಟ್ಟು ನೋಡಿಕೊಳ್ಳುವುದು ಅವರ ಕರ್ತವ್ಯ; ಹಾಗೆ ನೋಡಿಕೊಳ್ಳದೆ ಹೋದಲ್ಲಿ ಅವರ ಮೇಲೆ ದೂರು ದಾಖಲಿಸಿ ಜೀವನಾಂಶ ಪಡೆಯಬಹುದು ಎನ್ನುತ್ತದೆ ಕಾಯಿದೆ. ದೂರನ್ನು ಆಯಾ ಜಿಲ್ಲೆಯ ಆಯುಕ್ತರಿಗೆ ನೀಡಬೇಕು. ಆ ದೂರನ್ನು 90 ದಿನದೊಳಗಾಗಿ ನಿರ್ಣಯಿಸಬೇಕು ಎಂದೂ ಈ ಕಾಯಿದೆ ತಿಳಿಸುತ್ತದೆ. ಒಂದುವೇಳೆ, ಪೋಷಕರ ಆಸ್ತಿಯನ್ನು ಪಡೆದ ನಂತರ ಅವರಿಗೆ ಕಿರುಕುಳ ನೀಡುತ್ತಿದ್ದರೆ, ಆ ಮಕ್ಕಳನ್ನು ಮನೆಯಿಂದ ಹೊರಹಾಕುವಂತೆ ಆದೇಶ ತರಬಹುದು ಎಂದು ಮುಂಬೈ, ಉತ್ತರಾಖಂಡ್, ಚತ್ತೀಸಗಢ ಉಚ್ಚನ್ಯಾಯಾಲಯಗಳು ಹೇಳಿವೆ.

ಕಾನೂನುಗಳೊಂದಿಗೆ ಪ್ರತೀ ಊರುಗಳಲ್ಲಿ ಪೋಷಕರಿಗೆ, ಹಿರಿಯ ನಾಗರಿಕರಿಗೆ ಮನಸ್ಸಿಗೆ ಸಾಂತ್ವನ ಕೊಡುವ, ಕಾನೂನು ಸಲಹೆ ಕೊಡುವ, ಹಾಗೆಯೇ ಅವರಿಗೆ ಆಶ್ರಯ ಕೊಡಬಲ್ಲಂತಹ 'ವೃದ್ಧರ ಸಹಾಯವಾಣಿ ಸ್ಥಾಪಿಸಬೇಕಾದ ಅಗತ್ಯವೂ ಇದೆ.

ಪ್ರತಿಕ್ರಿಯಿಸಿ: **feedback@sudha.co.in**